


ಗುಂಡ: ನೀನೊಬ್ಬಳೇ ಬಾದಾಮಿ ತಿನ್ನುತ್ತಿದ್ದಿಯಾ, ನನಗೆ ರುಚಿ ನೋಡುವುದಕ್ಕಾದರೂ ಕೊಡು.

ಪದ್ದಿ: ಆಯ್ತು. ಇದನ್ನು ತಗೊಳ್ಳಿ.

ಗುಂಡ: ಒಂದೇ ಬಾದಾಮಿನಾ?

ಪದ್ದಿ: ಉಳಿದ ಬಾದಾಮಿಯದೂ ಅದೇ ರುಚಿ.

***

ಗುಂಡ: ಡಾಕ್ಟ್ರೇ, ನಾನು ಈ ಊರಿನ ಎಲ್ಲಾ ಆಸ್ಪತ್ರೆಗಳಲ್ಲೂ ಇದ್ದು ಬಂದಿದ್ದೇನೆ.

ತಿಮ್ಮ: ಹೆರಿಗೆ ಆಸ್ಪತ್ರೆಯಲ್ಲೂ ಇದ್ದೆಯಾ?

ಗುಂಡ: ಇದ್ದೆ ಡಾಕ್ಟ್ರೇ, ನಾನು ಹುಟ್ಟಿದ್ದೇ ಅಲ್ಲಿ.

***

ಪದ್ದಿ: ಪಲ್ಯಕ್ಕೆ ಎಷ್ಟು ಚಮಚ ಉಪ್ಪು ಹಾಕಲಿ?

ಗುಂಡ: ಎರಡು ತಿಂಗಳಿಂದ ಪಲ್ಯ ಮಾಡುತಿದ್ದರೂ ಎಷ್ಟು ಉಪ್ಪು ಹಾಕಬೇಕೆಂಬುದೇ ಗೊತ್ತಿಲ್ಲ. ಮತ್ತೆ ಬಯೊಡೇಟಾದಲ್ಲಿ ಕ್ಷಿಪ್ರವಾಗಿ ಕಲಿಯುವ ಗುಣವಿದೆ ಎಂದೆಲ್ಲಾ ಬರೆದುಕೊಳ್ತೀರಿ.

***

ಗುಂಡ: ನಾನು ಮೊದಲು ನನ್ನ ವಿಶ್ರಾಂತಿಗಾಗಿ ಮಲಗ್ತಿದ್ದೆ.

ತಿಮ್ಮ: ಈಗ ಯಾಕೆ ಮಲಗ್ತಿದ್ದಿಯಾ?

ಗುಂಡ: ಮೊಬೈಲ್‌ಗೆ ರೆಸ್ಟ್ ಕೊಡಲು ಮಲಗ್ತೀನಿ.

***

ಗುಂಡ: ನನ್ನ ಹೃದಯವನ್ನು ನನ್ನ ಗೆಳತಿ ಭಗ್ನ ಮಾಡಿದ್ದಕ್ಕೆ ಅವಳ ಐಫೋನ್ ಒಡೆದು ಹಾಕಿದೆ.

ತಿಮ್ಮ: ಆಮೇಲೆ ಏನಾಯ್ತು?

ಗುಂಡ: ಆಮೇಲೆ ಯಾರು ಹೆಚ್ಚು ಅತ್ತಿರಬಹುದು ಅಂತ ನಿನಗೆ ಗೊತ್ತಿರುತ್ತದೆ ಬಿಡು.

***

ಗುಂಡ: ಹುಟ್ಟು ಸಾವುಗಳೆಲ್ಲವೂ ಮೇಲೆ ಇರುವ ಭಗವಂತನ ಕೈಯಲ್ಲಿಯೇ ಇದೆ.

ತಿಮ್ಮ: ಮತ್ತೆ ನಮ್ಮ ಕೈಯಲ್ಲಿ ಏನಿದೆ?

ಗುಂಡ: ನಮ್ಮ ಕೈಯಲ್ಲಿ ಬರೀ ಮೊಬೈಲ್ ಇದೆ

***

ತಿಮ್ಮ: ಎಂಜಿನೀಯರಿಂಗ್ ಅಂದ್ರೆ ಎಷ್ಟು ವರ್ಷ?

ಗುಂಡ: ನಿನ್ನ ಪರ್ಸೆಂಟೇಜ್ ಎಷ್ಟು?

ತಿಮ್ಮ: ಶೇ 43 ಆಗಿದೆ ಸರ್.

ಗುಂಡ: ಹಾಗಾದರೆ 7–8 ವರ್ಷ ಆಗಬಹುದು.

***

ತಿಮ್ಮ: ನೀವು ಯಾಕೆ ನಮ್ಮ ಕಂಪನಿಗೆ ಸೇರಲು ಬಯಸುತ್ತೀರಿ?

ಗುಂಡ: ಯಾಕೆಂದರೆ ನಿಮ್ಮ ಆಫೀಸ್ ನಮ್ಮ ಮನೆಗೆ ಸಮೀಪದಲ್ಲಿಯೇ ಇದೆ.

***

ಪದ್ದಿ: ನೀನು ಕ್ಲಾಸ್‌ನಲ್ಲಿ ಮಲಗಿದ್ದು ಯಾಕೆ?

ಗುಂಡ: ನಿಮ್ಮ ಮಧುರ ಧ್ವನಿ ಕೇಳಿ ನಿದ್ರೆ ಬಂತು.

ಪದ್ದಿ: ಉಳಿದವರು ಯಾಕೆ ನಿದ್ರೆ ಮಾಡ್ತಿಲ್ಲ.

ಗುಂಡ: ಅವರೆಲ್ಲಾ ನಿಮ್ಮ ಮಾತು ಕೇಳ್ತಿಲ್ಲ ಮೇಡಂ.

***

ತಿಮ್ಮ: ಈಗಿನ ಎಷ್ಟೋ ಮಕ್ಕಳು ಕಡಿಮೆ ಅಂಕ ಬಂತು ಅಂತ ಆತ್ಮಹತ್ಯೆ ಮಾಡಿಕೊಳ್ತಾರೆ.

ಗುಂಡ: ಹೌದು, ಹಿಂದಿನ ಕಾಲದಲ್ಲಿ ನಮಗೆ ಬರುತಿದ್ದ ಅಂಕಗಳನ್ನು ನೋಡಿ ಮೇಷ್ಟ್ರಿಗೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಅನಿಸುತಿತ್ತೇನೋ.

—ಭೋಜರಾಜ ಸೊಪ್ಪಿಮಠ

ಐವತ್ತನೇ ವಿವಾಹ ವಾರ್ಷಿಕೋತ್ಸವದ ದಿನದಂದು ಗಂಡನ ಕಣ್ಣಲ್ಲಿ ಎರಡು ಹನಿ ಕಣ್ಣೀರು ನೋಡಿ

ಹೆಂಡತಿ: ನೀವು ಇಷ್ಟೊಂದು ಭಾವುಕರು ಅಂತ ತಿಳಿದಿರಲಿಲ್ಲ ಕಣ್ರೀ...

ಗಂಡ: ಐವತ್ತು ವರ್ಷಗಳ ಹಿಂದೆ ನಾವು ಕೋಣೆಯಲ್ಲಿ ಸಿಕ್ಕಾಗ ನಿಮ್ಮಪ್ಪ 'ಲಗ್ನ ಆಗ್ತೀಯಾ ಇಲ್ಲ ಐವತ್ತು ವರ್ಷ ಜೈಲಿಗೆ ಹಾಕ್ಲಾ' ಅಂತ ಕೇಳಿದ್ರು ಕಣೆ, ಒಂದು ವೇಳೆ ಜೈಲಿಗೆ ಹೋಗಿದ್ರೆ ಇಂದು ಬಿಡುಗಡೆ ಆಗ್ತಿತ್ತು; ನೆನೆಸಿಕೊಂಡು ಕಣ್ಣೀರು ಬಂದವು ಅಷ್ಟೇ!

***

ಸೋಫಾದಲ್ಲಿ ಸಾಕಷ್ಟು ಸ್ಥಳ ಇದ್ದರೂ, ಬೆವರು ಬರಿಸುವಷ್ಟು ಸೆಖೆ ಇದ್ದರೂ, ಗಂಡ ಹೆಂಡತಿಗೆ ತಾಗಿಕೊಂಡೇ ಕುಳಿತಿದ್ದಾನಂದ್ರೆ ಹೊಸದಾಗಿ ಮದುವೆಯಾಗಿದೆ ಅಂತ ಅರ್ಥ.

ಜೊತೆಯಾಗಿ ಕೂರದೇ ಬೇರೆ ಬೇರೆ ಸೋಫಾದಲ್ಲಿ ಕುಳಿತರು ಅಂದ್ರೆ ಮದುವೆಯಾಗಿ ಕನಿಷ್ಠ ಹತ್ತು ವರ್ಷ ಆಗಿದೆ ಅಂತ ಅರ್ಥ.

ಸೋಫಾದಲ್ಲಿ ಗಂಡನ ಪಕ್ಕದಲ್ಲಿ ಸ್ಥಳವಿದ್ದರೂ ಕೂರದೇ, ನೆಲದಲ್ಲಿ ಆರಾಮವಾಗಿ ಕುಳಿತು 'ಇಲ್ಲೇ ಚೆನ್ನಾಗಿದೆ' ಅಂತ ಹೆಂಡತಿ ಹೇಳಿದಳು ಅಂದರೆ ಆಯಪ್ಪನ ಸಹವಾಸ ಸಾಕಾಗಿದೆ ಅಂಥ ಅರ್ಥ!

***

ಒಂದು ಹಳ್ಳಿಯ ಗ್ರಾಮ ಪಂಚಾಯಿತಿಯ ಕಚೇರಿಯಲ್ಲಿ ಹೀಗೆ ಬರೆದಿತ್ತು

'ಹೆಬ್ಬೆಟ್ಟು ಒತ್ತಿ ಸಹಿ ಮಾಡಿದ ಬೆರಳನ್ನು ಗೋಡೆಯ ಮೇಲೆಲ್ಲ ಒರೆಸಿ ಗಲೀಜು ಮಾಡಬಾರದು'!

ಅದರ ಕೆಳಗೆ ಗುಂಡ ಬರೆದ 'ಮಗನೇ... ನೀ ಬರೆದದ್ದು ಅವರಿಗೆ ಓದೋಕ ಬಂದಿದ್ರ ಮತ್ಯಾಕೆ ಹೆಬ್ಬೆಟ್ಟು ಒತ್ತುತ್ತಿದ್ರೋ!'

—ಹನುಮಂತ ಭಟ್.ಬಿ.


